ರೈತರ ಪಂಪಸೆಟ್‌ಗಳಿಗೆ ಮೀಟರ್ ಅಳವಡಿಕೆ

3023:(3958)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯುತ್ ದರವನ್ನು ಎಷ್ಟು ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ;

ಆ) ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಲಿ ಎಷ್ಟು ಹೆಚ್.ಪಿ.ಯವರೆಗೆ ಉಚಿತವಾಗಿ ವಿದ್ಯುತ್ ನೀಡಲಾಗುತ್ತಿದೆ;

ಈ) ಹಾಲಿ ಎಷ್ಟು ಹೆಚ್.ಪಿ.ಯಿಂದ ಮೀಟರ್ ಅಳವಡಿಸಲು ಸರ್ಕಾರ ಉದ್ದೇಶಿಸಿದೆ?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಜುಲೈ 1998ರಲ್ಲಿ ವಿದ್ಯುತ್‌ದರಗಳನ್ನು ಪರಿಷ್ಕರಿಸಿದಾಗ ಉಂಟಾಗಿದ್ದ ಹೆಚ್ಚಳ ಶೇ. 11.6. ವಿದ್ಯುತ್ ಗ್ರಾಹಕರುಗಳ ಮನವಿಗಳನ್ನು ಪರಿಗಣಿಸಿ ಇದನ್ನು ಶೇ 9.8ಕ್ಕೆ ಇಳಿಸಲಾಗಿದೆ. ಮುಖ್ಯವಾಗಿ ಗೃಹಬಳಕೆ, ಸರ್ವವಿದ್ಯುತ್ ಗೃಹ ಮತ್ತು ಎಲ್.ಟಿ. ಕೈಗಾರಿಕೆಗಳಿಗೆ ಅನ್ವಯಿಸುವ ವಿದ್ಯುತ್ ದರಗಳನ್ನು ನವೆಂಬರ್ 98 ರಿಂದ ಕಡಿಮೆ ಮಾಡಲಾಗಿದೆ.

ಆ) 10 ಅಶ್ವಶಕ್ತಿಗಿಂತ ಕಡಿಮೆ ಸಾಮರ್ಥ್ಯದ ನೀರಾವರಿ ಪಂಪುಸೆಟ್ಟುಗಳ ಸ್ಥಾವರಗಳಿಗೆ ವಿದ್ಯುತ್ ಮೀಟರ್‌ಗಳನ್ನು ಹಾಕುವ ಪ್ರಸ್ತಾವನೆಯನ್ನು ಕೈ ಬಿಡುವುದು ಸರ್ಕಾರ ತಳೆದಿರುವ ಸಾಮಾನ್ಯ ನೀತಿಯಾಗಿದೆ.

ಇ) ಪ್ರಸ್ತುತ ಯಾವ ರೀತಿಯ ನೀರಾವರಿ ಪಂಪುಸೆಟ್ಟುಗಳಿಗೂ ಉಚಿತ ವಿದ್ಯುತ್ ನೀಡುತ್ತಿಲ್ಲ.

ಇ) 10 ಹೆಚ್.ಪಿ.ಗಿಂತ ಹೆಚ್ಚು ಸಾಮರ್ಥ್ಯವುಳ್ಳ ನೀರಾವರಿ ಪಂಪುಸೆಟ್ಟುಗಳ ಸ್ಥಾವರಗಳಿಗೆ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲಾಗುತ್ತಿದೆ, ಮತ್ತು ಇದನ್ನು ಮುಂದುವರೆಸಲಾಗುತ್ತದೆ.